# ಕಂಪು ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಸಂಕ್ರಾಂತಿ ಸಂಚಿಕೆ

ಸಂಪುಟ 2 ಸಂಚಿಕೆ 2

Newsletter of MKANT
Sankranti 2012


www.mallige.org


## ಈ ಸಂಚಿಕೆಯಲ್ಲಿ


| | |
|---|---|
| ದೀಪಾವಳಿ ವರದಿ | 1 |
| ಅಧ್ಯಕ್ಷರ ಸಂದೇಶ | 3 |
| ಟೀಕೆ-ಟಿಪ್ಪಣಿ | 3 |
| ನೆರೆಮನೆಯ ನರುಗಂಪು | 4 |
| ಸಂಪಾದಕೀಯ | 4 |
| ಮಲ್ಲಿಗೆ ಮೊಗ್ಗುಗಳು | 5 |
| Life Metaphor Poem | 6 |
| Raag Rhythm | 7 |
| ಸುಳ್ಳುಗಾದೆ | 8 |
| ಮ್ಯಾರಥಾನ್ ಯಶೋಗಾಥೆ | 9 |
| ಚಿತ್ರಾವಳಿ | 10 |


## ಸಂಭ್ರಮ ಸಡಗರದ ದೀಪಾವಳಿ

ಕನಕ ತಿರುಮಲೆ



**ನ**ವೆಂಬರ್ ೬,೨೦೧೧ ರಂದು ಮಲ್ಲಿಗೆ ಕನ್ನಡ ಕೂಟದ ವತಿಯಿಂದ ದೀಪಾವಳಿಯನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.ಸ್ವಾಗತ ಮತ್ತು ನೋಂದಣಿಯನ್ನು ಶ್ರೀಮತಿ.ರಾಜಶ್ರೀ ರಮೇಶ್, ಶ್ರೀಮತಿ.ನಿರುಪಮ ಶರ್ಮ, ಶ್ರೀಮತಿ.ಲತ ಶಾಸ್ತ್ರಿ, ಶ್ರೀಮತಿ.ವಾಣಿ ರಾಜೇಶ್, ಶ್ರೀಮತಿ.ಗಾಯತ್ರಿ ಮುತ್ಯ ಮತ್ತು ಶ್ರೀಯುತ ಶ್ರೀಧರ ಮಧುಗಿರಿಯವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕಾಫಿ ಮತ್ತು ಪಕೋಡ ಬಂದವರನ್ನು ಆದರಿಸಿತು.

ಸಮಾರಂಭದ ಸ್ವಾಗತ ಭಾಷಣದಲ್ಲಿ ಶ್ರೀಮತಿ.ಜಯಶ್ರೀ ಮೂರ್ತಿಯವರು ಮಾತಾಡಿ ಸಭಾಂಗಣ ದೊರಕಿದ್ದಕ್ಕೆ ಸಂತಸ ವ್ಯಕ್ತ ಪಡಿಸಿ, ಸಭಿಕರ ತಾಯ್ನಾಡಿನ ಒಲವಿಗೆ ಶ್ಲಾಘಿಸುತ್ತಾ ಸಂಜೆಯ ಕಾರ್ಯಕ್ರಮದಲ್ಲಿ ಸುಮಾರು ೧೧೦ ಕಲಾವಿದರು ಭಾಗವಹಿಸುತ್ತಿರುವುದಾಗಿ ಹೇಳಿದರು. ಹಾಗೂ ಎಲ್ಲರಿಗೂ ಸರ್‌ಪ್ರೈಸ್ ಆಗಿ ಮೈಸೂರಿನಿಂದ ಹಿರಿಯ ಕಲಾವಿದೆಯೊಬ್ಬರ ಕಾರ್ಯಕ್ರಮವಿರುವುದಾಗಿ ಹೇಳಿದರು.

ಸಂಜೆಯ ಕಾರ್ಯಕ್ರಮದ ಸೂತ್ರಧಾರರಾಗಿ ವಿದ್ಯಾ ಮತ್ತು ದತ್ತಪ್ರಸಾದ್ ದಂಪತಿಗಳು ತಮ್ಮ ಸರಸ–ವಿರಸ ಸಂಭಾಷಣೆಯಿಂದ ಎಲ್ಲರ ಮನ ರಂಜಿಸಿದರು. ಕಾರ್ಯಕ್ರಮಕ್ಕೆ ನಾಂದಿಯಾಗಿ ಕು॥ನವ್ಯ ಮತ್ತು ಕು॥ಖುಷಿ ಸುಶ್ರಾವ್ಯವಾಗಿ "ಯಾಕುಂದೇಂದು ತುಷಾರಹಾರಧವಳ" ಮತ್ತು "ವಿನಾಯಕ, ವಿಘ್ನವಿನಾಶಕ" ಗೀತೆಗಳನ್ನು ಹಾಡಿದರು.ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮಿಗಳು ದೂರವಾಣಿಯ ಮೂಲಕ ಆಶೀರ್ವಚನ ನೀಡಿ ಸರ್ವರಿಗೂ ಶುಭಕೋರಿದರು. ಡಲ್ಲಾಸ್‌ನಲ್ಲಿ ಕೃಷ್ಣ ಬೃಂದಾವನದ ಸ್ಥಾಪನೆಯ ಬಗ್ಗೆ ಇಚ್ಛೆ ವ್ಯಕ್ತಪಡಿಸಿದರು.



ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮೊದಲಿಗೆ ಅರಳುಮಲ್ಲಿಗೆ ಕನ್ನಡ ಶಾಲೆಯ ಮಕ್ಕಳು "ಬೆಂಡೆಕಾಯಿ ತೊಂಡೆಕಾಯಿ" ಹಾಡಿಗೆ ಮುದ್ದಾಗಿ ಹೆಜ್ಜೆ ಹಾಕಿದರು. ತದನಂತರ "ಫ್ಯೂಷನ್ ಡಾನ್ಸ್"ನಲ್ಲಿ ಸೂತ್ರಧಾರರು ಹೇಳಿದ ಹಾಗೆ 'ಟೆನ್ಷನ್, ಕನ್ಫ್ಯೂಷನ್' ಎಲ್ಲಾ ಬಿಟ್ಟು ಕಿಡ್ಸ್ ಫ್ಯೂಷನ್ ಬಗ್ಗೆ ಎಲ್ಲರ ಗಮನ ಹರಿಯಿತು. ಮಕ್ಕಳ ಡಾನ್ಸ್ ಸೂಪರ್ ಆಗಿ ಮೂಡಿ ಬಂದು ಪ್ರೇಕ್ಷಕರ ಶಿಳ್ಳೆ ಮತ್ತು ಚಪ್ಪಾಳೆ ಗಳಿಸಿತು. 'ಕರ್ನಾಟಕ ಸಂಗೀತ ತರಂಗ' ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ಸಂಗೀತ ಪ್ರತಿಭೆಯ ಉತ್ತಮ ಪ್ರದರ್ಶನ ನೀಡಿದರು. ಮಕ್ಕಳ ಸಾಧನೆ ಎತ್ತಿ ಕಾಣುತಿತ್ತು. ನಂತರದ ಕಾರ್ಯಕ್ರಮ, ಜ್ಞಾನಪೀಠ ಪ್ರಶಸ್ತಿ ವಿಜೇತ ಕಂಬಾರರ ಸುಪ್ರಸಿದ್ಧ "ಕಾಡು ಕುದುರೆ" ಹಾಡಿಗೆ ಅರಳುಮಲ್ಲಿಗೆ ಕನ್ನಡ ಶಾಲೆಯ ಮಕ್ಕಳಿಂದ ನೃತ್ಯ ಪ್ರದರ್ಶನ. ಮಕ್ಕಳ ವೇಷ ಮತ್ತು ನೃತ್ಯ ಎರಡೂ ಪ್ರೇಕ್ಷಕರ ಮನ ಸೆಳೆಯಿತು. ಕಂಬಾರರ ಪರಿಚಯ ಮುಂದಿನ ಪೀಳಿಗೆಯ ಮಕ್ಕಳು ಅಮೆರಿಗನ್ನಡದಲ್ಲಿ ಹೇಳಿದ್ದು ಬಣ್ಣಕಟ್ಟಿತ್ತು.

**ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು**



ಕರುನಾಡ ಗೀತೆ 'ಜಯಭಾರತ ಜನನಿಯ ತನುಜಾತೆ' ಸಭಿಕರನ್ನು ತಾಯ್ನಾಡ ಪ್ರೀತಿಯಲ್ಲಿ ತೇಲಿಸಿತು. 'ಅತ್ತೆ ಸೊಸೆಯರ ಅದ್ಧೂರಿ ದೀಪಾವಳಿ' ಹೆಸರಿಗೆ ತಕ್ಕಂತೆ ನಾಟಕವು ಕೂಡ ಅದ್ಧೂರಿ ಯಾಗಿ ಮೂಡಿ ಬಂದಿತು. ಎಲ್ಲ ಪಾತ್ರಧಾರಿಗಳ ಅಚ್ಚ ಕನ್ನಡದ ಉಚ್ಚಾರಣೆ ಅಚ್ಚರಿ ತರಿಸಿತು. ಚೊಕ್ಕವಾದ ನಿರ್ದೇಶನ ಕೂಡ."ಬಾನಿಗೆಲ್ಲ ಹಬ್ಬ" ನೃತ್ಯ ಎಲ್ಲರ ಕಣ್ಣಿಗೆ ಹಬ್ಬವಾಗಿ ಸೊಗಸಾಗಿ ಮೂಡಿಬಂತು. ನಂತರದ ಕಾರ್ಯಕ್ರಮ "ಒಡಿಸ್ಸಿ ನೃತ್ಯ"– ಶಂಕರಾಚಾರ್ಯರ ನವ ದುರ್ಗೆಯ ಮೇಲಿನ ವಿರಚಿತ ಕೃತಿ ಅತ್ಯಂತ ಭಕ್ತಿಪೂರ್ಣವಾಗಿತ್ತು.

ಶ್ರೀಮತಿ. ರಾಜಶ್ರೀ ರಮೇಶ್ ರವರು ತಮ್ಮ ಅಧ್ಯಕ್ಷರ ಭಾಷಣದಲ್ಲಿ ಎಲ್ಲರಿಗೂ ಶುಭ ಕೋರಿ ಆ ದಿನದ ಕಾರ್ಯಕ್ರಮಕ್ಕೆ ಸ್ಥಳಾವಕಾಶ ದೊರಕಿದ್ದು ಅದೃಷ್ಟ ಮತ್ತು ಅದಕ್ಕೆ ಕಾರಣರಾದ ಶ್ರೀಮತಿ.ಜಯಶ್ರೀ ಮೂರ್ತಿಯವರಿಗೆ ಧನ್ಯವಾದ ಹೇಳಿದರು.ಈ ಬಾರಿಯ ನೋಂದಣಿಗೆ ಪೇ ಪಾಲ್ ಉಪಯೋಗಿಸಿದ್ದು ಸಹಾಯಕವಾಗಿದೆ ಎಂದು ಹೇಳುತ್ತಾ, ಮುಂದಿನ ಯುಗಾದಿಯ ಕಾರ್ಯಕ್ರಮ ಮಾರ್ಚ್ ೨೫ ರಂದು ಹೊಸ ಸಮಿತಿಯ ನಿರ್ಮಾಣಕ್ಕೆ ಸದಸ್ಯರೆಲ್ಲರ ಸಹಯೋಗ ಕೋರಿದರು. ವಂದನಾರ್ಪಣೆ ಜವಾಬ್ದಾರಿಯನ್ನು ಹೊತ್ತ ಮಲ್ಲಿಗೆ ಕನ್ನಡಕೂಟದ ಕಾರ್ಯದರ್ಶಿಗಳಾದ ಶ್ರೀಯುತ ಸುಕುಮಾರ್ ಮುತ್ಯರವರು ಎಲ್ಲ ಪ್ರಾಯೋಜಕರು, ಊಟದ ವ್ಯವಸ್ಥೆ ಮಾಡಿದ ಉಡುಪಿ ಕೆಫೆ, ಅಂದಿನ ಕಾರ್ಯಕ್ರಮಕ್ಕೆ ಸ್ಥಳಾವಕಾಶ ದೊರಕಿಸಿದ ಜಯಶ್ರೀ ಮೂರ್ತಿಯವರು, ಕಾರ್ಯಕ್ರಮದಲ್ಲಿ ಭಾಗವಹಿಸಿದ ಪೋಷಕರು ಮತ್ತು ಮಕ್ಕಳು, ಸೂತ್ರಧಾರ ದತ್ತ ದಂಪತಿಗಳು, ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಕನ್ನಡಿಗರಿಗೂ ಸಮಿತಿಯ ಪರವಾಗಿ ಧನ್ಯವಾದ ಹೇಳಿದರು.


ವಂದನಾರ್ಪಣೆಯ ನಂತರ ಎಲ್ಲರ ಮನರಂಜಿಸಿದ್ದು, ದೊಡ್ಡವರ ಕೋಲಾಟದ ಕಾರ್ಯಕ್ರಮ– ಮನಮೋಹಕ 'ಕೃಷ್ಣ ಲೀಲೆ' ನೃತ್ಯ. ಊಟದ ಹೊತ್ತು ಹತ್ತಿರ ಬಂದಂತೆ, "ಉಪ್ಪಿಟ್ಟು" ನಾಟಕ ನಗುವಿನ ಅಲೆ ಎಬ್ಬಿಸಿತು. ದೀಪಾವಳಿ ಕಾರ್ಯಕ್ರಮದ ಸರ್‌ಪ್ರೈಸ್ ಭಾಗ, ದಿವಂಗತ ಕೆ. ಎಸ್. ಅಶ್ವತ್ಥರ ಪುತ್ರಿ, ಶ್ರೀಮತಿ ವಿಜಯ ಮೂರ್ತಿಯವರಿಂದ ನೃತ್ಯ. ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂದು ಕಲೆಗೆ ವಯಸ್ಸಿನ ಮೇರೆ ಇಲ್ಲ ಎಂಬುದನ್ನು ಸಾಬೀತು ಮಾಡಿತು. ಕೊನೆಯದಾಗಿ ಅಂದಿನ ಕಾರ್ಯಕ್ರಮವು ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಗಿ ಎಲ್ಲರೂ ಸಂತಸದಿಂದ ಊಟದ ಹಾಲ್‌ನತ್ತ ನಡೆದರು. ಮೊದಲಿಗೆ ಸ್ವಲ್ಪ ಗಲಿಬಿಲಿಯಾದರೂ ಎಲ್ಲರ ಸಹಕಾರದಿಂದ ಊಟ ಸಾವಕಾಶವಾಗಿ ಸಾಗಿತು. ರುಚಿಯಾದ ಊಟ, ಕಿವಿ ತುಂಬ ಕನ್ನಡ ಮತ್ತೇನು ಬೇಕು? 'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು' ಎಂಬ ಕವಿವಾಣಿ ಎಷ್ಟು ಸತ್ಯ!



**ಎಲ್ಲಾರು ಬರೆಯೋ codeನಲ್ಲೂ bugsಏ**

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



**ಮ**ಲ್ಲಿಗೆ ಸಂಘದ ನನ್ನ ಪ್ರೀತಿಯ ಬಂಧು ಮಿತ್ರರಿಗೆ,

ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ೨೦೧೨ ನಿಮ್ಮೆಲ್ಲರಿಗು ಒಳ್ಳೆ ಆರೋಗ್ಯ, ಯಶಸ್ಸು ತರಲಿ ಎಂದು ಆಶಿಸುತ್ತೀನಿ.



ಮಲ್ಲಿಗೆ ಸಂಘದ ಇ–ಪತ್ರಿಕೆ, ಕಂಪು–ಸಂಕ್ರಾಂತಿ ಸಂಚಿಕೆಗೆ ಮಕರ ಸಂಕ್ರಮಣ ಹಬ್ಬದ ಶುಭಾಶಯಗಳೊಂದಿಗೆ ಸ್ವಾಗತ. ಸಾಮಾನ್ಯವಾಗಿ ಬೆಳಗ್ಗೆ ಅಭ್ಯಂಜನದ ನಂತರ ದೇವರ ಪೂಜೆ ಮಾಡಿ, ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ, ಗಾಳಿಪಟ ಹಾರಿಸೋದು ಎಷ್ಟು ಸಂಭ್ರಮ, ಅಲ್ಲವಾ?

ಈ ವರ್ಷ ಸಂಕ್ರಾಂತಿ ಹಬ್ಬ ಶನಿವಾರ/ಭಾನುವಾರ ಆಗಿರುವುದರಿಂದ ಇಡೀ ವಾರಾಂತ್ಯ ಆಚರಿಸಬಹುದು. ಊಟಕ್ಕೆ, ಬಿಸಿ ಬಿಸಿ ಹುಗ್ಗಿ ತಿಂದು ಮಧ್ಯಾಹ್ನ ನಿಮ್ಮ ಮಲ್ಲಿಗೆ ಬಂಧುಗಳ ಬರಹ, ಸುದ್ದಿ, ಸಮಾಚಾರ, ಇತ್ಯಾದಿ ತಂದಿರುವ ಇ –ಕಂಪು ವನ್ನು ಸವಿಯುವಿರಿ. ನಮ್ಮ ಮಾತೃಭಾಷೆ ಕನ್ನಡದ ಮುತ್ತುಗಳನ್ನು ಪೋಣಿಸಿ, ಕಂಪು ಎಂಬ ಒಳ್ಳೆ ಹಾರವಾಗಿ ಮೂಡಿಸಿದ ಶ್ರೀಮತಿ ಪೂರ್ಣಿಮ ಸುಬ್ರಹ್ಮಣ್ಯ ಅವರಿಗೆ ಮಲ್ಲಿಗೆ ಸಮಿತಿ ಪರವಾಗಿ, ಮಲ್ಲಿಗೆ ಸದಸ್ಯರ ಹಾಗೂ ಎಲ್ಲಾ ಓದುಗರ ಪರವಾಗಿ ನನ್ನ ಧನ್ಯವಾದಗಳು. ನೀವೆಲ್ಲಾ ಇದನ್ನು ಓದಿ, ಓದಿಸಿ, ಆನಂದಿಸಿ, ನಿಮ್ಮ ಅನಿಸಿಕೆಗಳನ್ನು ತಿಳಿಸುವಿರೆಂದು ನಂಬಿರುತ್ತೀನಿ.



ಕಳೆದ ವರ್ಷದ ದೀಪಾವಳಿ ಕಾರ್ಯಕ್ರಮ ಬಹಳ ಅದ್ದೂರಿ ಆಗಿ ನಡೆಯಿತು. ಅದರ ಯಶಸ್ಸಿಗೆ ಕಾರಣರಾದ ನನ್ನ ಸಮಿತಿ ಸದಸ್ಯರಿಗೆ, ಎಲ್ಲ ಸ್ವಯಂಸೇವಕರಿಗೆ, ಮನರಂಜನ ಕಾರ್ಯಕ್ರಮದಲ್ಲಿ ಪಾತ್ರವಹಿಸಿದವರಿಗೆ ಹಾಗು ತಪ್ಪದೆ ಬಂದು ನಮ್ಮೊಡನೆ ಆ ಸುಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಲ್ಲಿಗೆ ಸದಸ್ಯರಿಗೆ ನನ್ನ ಹೃತ್ಪೂರ್ವಕ ವಂದನೆಗಳು.



ಮಲ್ಲಿಗೆ ಸಂಘದ ಮುಂದಿನ ಕಾರ್ಯಕ್ರಮ ಯುಗಾದಿ – ೨೦೧೨ ಆಚರಿಸಲು ತಯಾರಿ ಶುರು ಆಗಿದೆ. ಹೆಚ್ಚಿನ ಮಾಹಿತಿ ಸಧ್ಯದಲ್ಲೆ ತಿಳಿಸುತ್ತೀವಿ.

ಮತ್ತೊಮ್ಮೆ ಎಲ್ಲರಿಗು ಸಂಕ್ರಾಂತಿ ಹಬ್ಬದ ಶುಭಾಶಯಗಳು!



ಎಲ್ಲಾದರು ಇರು ಎಂತಾದರು ಇರು ಎಂದೆಂದು ಕನ್ನಡವಾಗಿರು
ಜೈ ಹಿಂದ್! ಜೈ ಕರ್ನಾಟಕ!

ಇಂತಿ ನಿಮ್ಮ ವಿಶ್ವಾಸಿ
ರಾಜಶ್ರಿ ರಮೇಶ್

### *ಟೀಕೆ-ಟಿಪ್ಪಣಿ*

Thank you Meena Bhardwaj for the wonderful job you have done along with other members of your group. The newsletter is filled with such delightful information!!!
I was proud to know how accomplished our "DFW Kannadiga Balaga" is.

Keep up the good job.

- Kamakshi Gopal

## ನೆರೆಮನೆಯ ನರುಗಂಪು

- ಅಭಿಜೀತ್ ಪ್ರಹ್ಲಾದ್,NJ


### ಸುಗ್ಗಿಯಾನ



ಹೊಸ ವರ್ಷವೂ ನುಗ್ಗಿ
ನವ ಹರ್ಷವ ಜಗ್ಗಿ
ತಿಳಿ ಮೊಳಕೆಯ ಹಿಗ್ಗಿ
ಹಸಿರಿಸಿದೆ ಈ ಸುಗ್ಗಿ !



ಕಾಮನಬಿಲ್ಲಿನ ಮುಗಿಲಾಗಿ
ಕಾಗದವು ಗಾಳಿಪಟವಾಗಿ
ಕಬ್ಬು ಸಕ್ಕರೆಯಚ್ಚು ಜೊತೆಯಾಗಿ
ಎಳ್ಳು-ಬೆಲ್ಲಾ ಸಿಹಿ ನುಡಿಯಾಗಿ !




ತಟ್ಟುತ ನೇಗಿಲ ಕ್ರಾಂತಿ
ಬೀರುತ ಸೂರ್ಯನ ಭ್ರಾಂತಿ
ನೀಡುತ ಶೀತಲ ವಿಶ್ರಾಂತಿ
ಮೆರುಗಿದೆ ಮಕರ ಸಂಕ್ರಾಂತಿ !

***

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

ಭಾರತೀಯ ಹಬ್ಬಗಳೇ ಹೀಗೆ. ಮೂಲತಃ ಪ್ರಕೃತಿಯ ಆರಾಧಕರಾದ ನಮಗೆ ಅಲ್ಲಿಯ ಪ್ರತಿ ತಿರುವೂ ಪೂಜಾರ್ಹ, ಪ್ರತಿ ಸಂಚಲನವೂ ಸಡಗರ. ನೇಸರ ತನ್ನ ಪಥ ಬದಲಾಯಿಸುವ ಈ ಸಂಕ್ರಾಂತಿ ಪರ್ವಕಾಲದ ಆಚರಣೆಗಳಿಗೂ ಅದೇ ನಂಟು. ಚಳಿಗೆ ಮೈ ಒಣಗದಂತೆ ಪುಷ್ಟಿಕರ ಎಳ್ಳು-ಬೆಲ್ಲದ ಮಿಶ್ರಣ ಮತ್ತು ಸುಗ್ಗಿಯ ಹೊಸ ಫಸಲಿನ ಹಂಚುವಿಕೆ. ಬೆಳೆ ತೆಗೆಯಲು ಶ್ರಮಿಸಿದ ಜಾನುವಾರುಗಳಿಗೂ ಜಳಕ, ಪೂಜೆ, ಸುಗ್ರಾಸ ಭೋಜನ. ಈ ಬೇರಿನ ಚಿಗುರುಗಳಾದ ನಮಗೆ ಎಲ್ಲಿದ್ದರೂ, ಸಂಕ್ರಾಂತಿ ಹಾಗೂ ಮತ್ತೆಲ್ಲಾ ಹಬ್ಬಗಳಲ್ಲೂ ಅದೇ ಸಂಭ್ರಮ, ಸಂತೋಷ. ಕೆಲವು ಆಚರಣೆಗಳು ಬದಲಾದ ದೇಶ-ಕಾಲಗಳಲ್ಲಿ ಮರೆಯಾದರೂ, ಒಳಗಿನ ಹೂರಣ ಮತ್ಯಾವುದೋ ರೂಪದಲ್ಲಿ ತನ್ನ ಕಂಪನ್ನು ಪಸರಿಸುವುದು ಅಚ್ಚರಿಯ ವಿಷಯ.

ಈ ಸಂಕ್ರಾಂತಿ ನಿಮ್ಮೆಲ್ಲರಿಗೂ ಶುಭ ತರಲಿ, ಧನಾತ್ಮಕ ಬದಲಾವಣೆಯನ್ನು ಬಿಂಬಿಸಲಿ. ಹಾರೈಕೆಗಳ ಜೊತೆಯಲ್ಲಿ ನಿಮ್ಮೆಲ್ಲರ "ಇ-ಕಂಪು" ಮತ್ತೊಮ್ಮೆ ನಿಮ್ಮ ಮಡಿಲಿಗೆ ಬಂದಿದೆ. ಇದು ನಿಮ್ಮೆಲ್ಲರ, ಒಂದು ಸಮುದಾಯದ ಸದಭಿರುಚಿಯ ಸಂಗ್ರಹ. ಇದರ ಸೌರಭವನ್ನು ಹೆಚ್ಚಿಸಲು ನಿಮ್ಮೆಲ್ಲರ ಸಹಕಾರ, ಸಲಹೆ, ಪ್ರೋತ್ಸಾಹ ಅತ್ಯಗತ್ಯ.ಬನ್ನಿ, ಹೆಚ್ಚಿನ ರೀತಿಯಲ್ಲಿ ಪಾಲ್ಗೊಳ್ಳಿ ಎಂದು ವಿನಮ್ರ ಕೋರಿಕೆ.

ಸಂಕ್ರಾಂತಿ "ಹೊಸ ಬಗೆಯಲಿ ಬರಲಿ, ಸುಖ ಸಾವಿರ ತರಲಿ".
ಶುಭಾಶಯಗಳೊಂಡಿಗೆ
ಪೂರ್ಣಿಮ ಸುಬ್ರಹ್ಮಣ್ಯ

**laptopಗೊಂದು ಕಾಲ i-padಗೊಂದು ಕಾಲ**

# ಪರಿಚಯ

- ಮೀನಾ ಭಾರದ್ವಾಜ್



## ನಾಗಶ್ರೀ ವಿದ್ಯಾಶಂಕರ್



ಡಲ್ಲಾಸ್ ಮೆಟ್ರೋ ನಗರವಾಸಿಗಳಿಗೆ ಚಿರಪರಿಚಿತ ಹೆಸರು ಕುಮಾರಿ ನಾಗಶ್ರೀ ವಿದ್ಯಾಶಂಕರ್. ಇವಳ ಸುಶ್ರಾವ್ಯ ಗಾಯನಕ್ಕೆ ಮನ ಸೋಲದವರಿಲ್ಲ. ಸಂಗೀತದಲ್ಲಿ ಸವಾಲು ಎದುರಾಗುವುದು ಕ್ರಿಯಾಶೀಲತೆಯಲ್ಲಿ. ರಾಗ, ಆಲಾಪನೆ,ಸ್ವರಪ್ರಸ್ತಾರ,ಸ್ವರ ಕಲ್ಪನೆಯಲ್ಲಿ ಅವರ ಪ್ರತಿಭೆ ಹೊರಹೊಮ್ಮುತ್ತದೆ. ಇವಳಿಗೆ ಇರುವ ಸ್ಪಷ್ಟ ಉಚ್ಚಾರಣೆ, ರಾಗ ಜ್ಞಾನ ನೋಡಿದರೆ, ಇವಳು ಅಮೆರಿಕೆಯಲ್ಲಿ ಬೆಳೆದ ಹುಡುಗಿಯೇ ಎನ್ನುವ ಅಚ್ಚರಿಯನ್ನು ಮೂಡಿಸುತ್ತಾಳೆ.

ನಾಗಶ್ರೀ ಬಂದಿರುವುದು ಸಂಗೀತಗಾರರ ಕುಟುಂಬದಿಂದ. ವೃತ್ತಿಯಲ್ಲಿ ಸಾಫ್ಟ್ವೇರ್ ಇಂಜಿನಿಯರ್ ಆದರೂ ಪ್ರವೃತ್ತಿಯಲ್ಲಿ ಗಾಯಕಿಯಾದ ತಾಯಿ ಜಯಶ್ರೀಯವರೇ ಮೊದಲ ಗುರು. ದೊಡ್ಡಮ್ಮ ಶ್ರೀಮತಿ. ಗಾಯತ್ರಿ ಕೂಡ ಗಾಯಕಿ ಹಾಗು ಸದ್ಯ ಮೈಸೂರು ವಿಶ್ವವಿದ್ಯಾನಿಲಯದ ಸಂಗೀತ ವಿಭಾಗದ ಮುಖ್ಯಸ್ಥೆ. ತಾತ ಶ್ರೀಕಂಠಯ್ಯನವರು ವಯೊಲಿನ್ ವಾದಕರು. ಮೈಸೂರ್ ಸಹೋದರರೆಂದೇ ಖ್ಯಾತಿಯಾಗಿರುವ ಮೈಸೂರ್ ಮಂಜುನಾಥ್ ಹಾಗು ಮೈಸೂರ್ ನಾಗರಾಜ್ ಅವರ ತಂದೆಯವರ ಒಡನಾಡಿಗಳು ಹಾಗೂ ಆಪ್ತ ಮಿತ್ರರೂ ಹೌದು.

ಬಾಲ್ಯದಿಂದಲೇ ನಾಗಶ್ರೀಗೆ ಸಂಗೀತದ ಮೇಲೆ ವಿಶೇಷ ಆಸಕ್ತಿ. ೨೦೦೪ ನೇ ಇಸವಿಯಲ್ಲಿ ಸದ್ಯ ಮೈಸೂರಿನಲ್ಲಿ ಇರುವ ಶ್ರೀಮತಿ.ಎಂ. ವಿ. ಅನಿತಾ ಅವರಿಗೆ ನಾಗಶ್ರೀಯನ್ನು ಪರಿಚಯಿಸಲಾಯಿತು. ಅವರಿಂದ ಶಾಸ್ತ್ರೋಕ್ತವಾಗಿ ಸಂಗೀತ ಕಲಿಕೆ ಪ್ರಾರಂಭವಾಯಿತು. ಎಲ್ಲ ಮಕ್ಕಳು ಅಜ್ಜಿ ತಾತನ ಮನೆಗೆ ಬೇಸಿಗೆ ರಜಾ ಕಳೆಯಲು ಹೋದರೆ, ನಾಗಶ್ರೀ ಅಮೇರಿಕಾದಿಂದ ಸಂಗೀತ ಕಲಿಯಲು ಮೈಸೂರಿಗೆ ಬರುತ್ತಿದ್ದಳು. ನಂತರ ಸ್ಥಳೀಯ ಗಾಯಕಿಯರಾದ ಶ್ರೀಮತಿ. ಇಂದು ಮಾಮಿ ಹಾಗು ದೀಪ ಶ್ರೀನಿವಾಸ್ ಅವರಿಂದ ಹೆಚ್ಚಿನ ಮಾರ್ಗದರ್ಶನ ಪಡೆದಳು. ಕಳೆದ ಎರಡು ತಿಂಗಳಿಂದ ಅಮೇರಿಕಾ ಪ್ರವಾಸದಲ್ಲಿರುವ, ಆಕಾಶವಾಣಿಯಲ್ಲಿ 'ಎ' ದರ್ಜೆ ಗಾಯಕಿಯಾದಂಥ ವಿದುಷಿ ಶ್ರೀಮತಿ ಪಿ. ರಮಾ ಅವರಿಂದ ಸತತವಾಗಿ ಸಂಪೂರ್ಣ ಕಛೇರಿ ನಡೆಸಲು ಬೇಕಾದ ಅಂಶಗಳನ್ನು ಕಲಿತಳು.

೨೦೦೭ ನೇ ಇಸವಿಯಲ್ಲಿ ಕಾಮತ್ ಹೋಟೆಲ್ ಮೈಸೂರ್ ನವರು ನಡೆಸುವ ನಿತ್ಯ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಲ್ಲದೆ, ಪ್ರತಿ ಬೇಸಿಗೆಗೆ ತಪ್ಪದೆ ಬೆಂಗಳೂರಿನ 'ಸಂಧ್ಯಾ ಸಂಜೀವಿನಿ' ವೃದ್ಧಾಶ್ರಮದಲ್ಲಿ ಹಿರಿಯರಿಗೆ ಹಾಡಿ ಮನರಂಜಿಸುತ್ತಿದ್ದಳು.

ಸಂಗೀತವಲ್ಲದೆ ವಿಜ್ಞಾನ ಸಂಶೋಧನೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ನಾಗಶ್ರೀ, ಸ್ಥಳೀಯ ವಿಶ್ವ ವಿದ್ಯಾನಿಲಯದ ಆರೋಗ್ಯ ವಿಜ್ಞಾನ ಇಲಾಖೆಯ ಮುಖ್ಯಸ್ಥರಾಗಿರುವ ಶ್ರೀ. ಅಲಕಾನಂದ ಬಸು ಹಾಗು ಡಾ!!ಚಂದ್ರಮೋಹನ್ ಅವರೊಡಗೂಡಿ ಕೀಮೋ ಥೆರಪಥಿಕ್ ಡ್ರಗ್ ರೆಸಿಸ್ಟೆನ್ಸ್ ಹಾಗು ಚರ್ಮ ಖಾಯಿಲೆಯಲ್ಲಿ ಒಂದಾದ ಲುಪಸ್ ಅನ್ನು ಪ್ರಥಮ ಹಂತದಲ್ಲಿ ಕಂಡು ಹಿಡಿಯುವ ಬಗ್ಗೆ ಸಂಶೋಧನೆಯನ್ನು ನಡೆಸಿ, ರಾಜ್ಯ ಮಟ್ಟದ ವಿಜ್ಞಾನ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನು ಗಳಿಸಿದ್ದಾಳೆ. ೧೨ನೇ ತರಗತಿಯನ್ನು ಅತಿ ಹೆಚ್ಚು ಅಂಕಗಳನ್ನು ಪಡೆಯುವುದರೊಂದಿಗೆ ಮುಗಿಸಿ, ಪೂರ್ಣ ವಿದ್ಯಾರ್ಥಿ ವೇತನದೊಂದಿಗೆ ಸ್ಥಳೀಯ ಕಾಲೇಜ್ನಲ್ಲಿ ವೈದ್ಯಕೀಯ ಪೂರ್ವ ಶಿಕ್ಷಣವನ್ನು ಅಭ್ಯಸಿಸುತ್ತಿದಾಳೆ.

**code ಮಾಡಕ್ಕೆ ಬದರ್ೋನು product ಸರಿ ಇಲ್ಲ ಅಂದನಂತೆ**




ಕಳೆದ ಜನವರಿಯಲ್ಲಿ ಭಾರತಕ್ಕೆ ಭೇಟಿ ಕೊಟ್ಟು ಮೈಸೂರು ನಗರದಲ್ಲಿ ಪರಿಪೂರ್ಣ ಕಛೇರಿಯನ್ನು ನೀಡಿರುತ್ತಾಳೆ. ಇವಳಿಗೆ ಒಂದು ಆಡಿಯೋ ಸಿಡಿಯನ್ನು ಹೊರ ತರುವ ಆಶಯವೂ ಉಂಟು. ಕುಮಾರಿ ನಾಗಶ್ರೀಗೆ ಕನ್ನಡ ಹಾಗು ಮಲ್ಲಿಗೆ ಕನ್ನಡ ಸಂಘದ ಬಗ್ಗೆ ಅಪಾರ ಅಭಿಮಾನ. ತನ್ನ ಪ್ರತಿಬೆಗೆ ಅವಕಾಶದ ವೇದಿಕೆಯನ್ನು ಕಲ್ಪಿಸಿಕೊಟ್ಟ ಮಲ್ಲಿಗೆ ಕನ್ನಡ ಸಂಘವನ್ನುಸದಾ ಸ್ಮರಿಸುತ್ತಾಳೆ. ಈ ಬಹುಮುಖ ಪ್ರತಿಭೆ ಕು.ನಾಗಶ್ರೀಯ ಭವಿಷ್ಯ ಉಜ್ಜ್ವಲವಾಗಲಿ, ಅವಳ ಗಾಯನ ಎಲ್ಲಾ ಕಡೆ ಪಸರಿಸಲಿ ಎಂದು ಮಲ್ಲಿಗೆ ಕನ್ನಡ ಸಂಘ ಹಾರೈಸುತ್ತದೆ.

## Life metaphor Poem

*- Navin Chikkodi, 6th Grade*

*Well, child, I'll tell you:*
*Life for me is like a circus.*
*It's had terrible times in it,*
*And fear,*
*And falling from the top of your formation.*
*And broken bones hurt a lot especially when*
*Falling 20 feet.*
*But all the time*
*I have been pushing ahead,*
*And working hard,*
*And having success,*
*And sometimes making money in the process.*

*So, child, don't you turn back.*
*Don't give up on your dreams.*
*'cause you find it worth living.*
*Don't you stop thinking positive –*
*For I am still hoping you don't fall 20 feet,*
*I am still there hoping you succeed,*
*And life for me is like a circus.*

***

## Raag Rhythm

- ಮೀನಾ ಭಾರದ್ವಾಜ್

ನಿಮ್ಮ ಮಗು ಈಗಾಗಲೇ ಕಿಂಡರ್ ಗಾರ್ಟನ್‌ಗೆ ಹೋಗುತ್ತಿದೆ ಎಂದರೆ ನಿಮಗಾಗಲೇ ಅನುಭವವಾಗಿರುವ ವಿಷಯ- ಕ್ರಿಸ್ಮಸ್ ಸಮಯದಲ್ಲಿ ಶಾಲಾ ಕಾರ್ಯಕ್ರಮದಲ್ಲಿ ಬಣ್ಣ ಬಣ್ಣದ ಅಂಗಿಯನ್ನು ತೊಟ್ಟು ಮುದ್ದು ಮಕ್ಕಳು ಸಾಲಾಗಿ ವೇದಿಕೆ ಮೇಲೆ ಬಂದು ಕ್ರಿಸ್ಮಸ್ ಹಾಡುಗಳನ್ನು ಹಾಡುತ್ತಾರೆ. ಮಗು ಈ ರೀತಿಯ ಕಾರ್ಯಕ್ರಮಕ್ಕೆ ತಯಾರಾಗುತ್ತಿದೆ ಎನ್ನುವ ಕಲ್ಪನೆಯೂ ನಮ್ಮಲ್ಲಿ ಇರುವುದಿಲ್ಲ. ಇದೇ ರೀತಿ ನಿಮ್ಮ ಮಕ್ಕಳು ಮಿಡ್ಲ್ ಸ್ಕೂಲ್ಗೆ ಬಂದಿದ್ದಾರೆಂದರೆ ನಿಮ್ಮ ಮಕ್ಕಳು ಒಂದಲ್ಲ ಒಂದು ವಾದ್ಯವನ್ನು ನುಡಿಸುತ್ತಿರುತ್ತಾರೆ. “ಅರೆರೆ, ನಾವು ಸಂಗೀತವೆಂದರೆ ಗಣಿತದಷ್ಟೇ ಕ್ಲಿಷ್ಟಕರವಾದ ವಿಷಯ! ಇದು ಎಲ್ಲರಿಗೂ ಒಲಿದು ಬರುವುದಿಲ್ಲ” ಎಂದು ಕೊಂಡಿದ್ದೆವಲ್ಲ. ಬರಿ ಆರು ತಿಂಗಳಲ್ಲಿ ದೊಡ್ಡ ದೊಡ್ಡ ರಚನೆಗಳನ್ನು ತಾವು ಇಷ್ಟಪಟ್ಟ ವಯೋಲಿನ್ನಲ್ಲೋ, ವಿಯೋಲದಲ್ಲೋ, ಕ್ಲಾರಿಯೋನೆಟ್ನಲ್ಲೋ ಅಥವಾ ಸಾಕ್ಸೋಫೋನ್ನಲ್ಲೋ ನಿಮ್ಮ ಮಕ್ಕಳು ನಿಮ್ಮ ಮುಂದೆ ಮಂಡಿಸಿರುವುದನ್ನು ನೋಡಿರುತ್ತೀರಿ. ಈ ರೀತಿಯ ಕಾರ್ಯಕ್ರಮವನ್ನು ನೋಡಿದಾಗಲೆಲ್ಲ ನಾರ್ತ್ ಡಲ್ಲಾಸ್ ವಾಸಿಗಳಿಗೆ ಚಿರಪರಿಚಿತರಾಗಿದ್ದ ಶ್ರೀಮತಿ ಇಂದು ಮಾಮಿಯವರಿಗೆ ಅನ್ನಿಸಿದ್ದು ಇಷ್ಟು, “ನಮ್ಮ ಶಾಸ್ತ್ರೀಯ ಸಂಗೀತಕ್ಕೆ ಪಾಶ್ಚಾತ್ಯ ಸ್ವರ ಪ್ರಸ್ತಾರವನ್ನು ಹಾಕಿ ಕೊಟ್ಟರೆ ಪ್ರಾಯಶಃ ಮಕ್ಕಳಿಗೆ ಸಂಗೀತದ ನೋಟ್ಸ ಗಳನ್ನು ಓದಲು ಸುಲಭವಾಗಬಹುದು”. ಈ ಪರಿಕಲ್ಪನೆಯನ್ನು ಪ್ರಯೋಗಿಸಿ ಮಕ್ಕಳ ತಂಡವನ್ನು ತಯಾರಿಸಿ, ಹಲವಾರು ವಾದ್ಯಗೋಷ್ಟಿಯ ಕಾರ್ಯಕ್ರಮಗಳನ್ನು ಇತ್ತರು. ಕೆಲವು ವರ್ಷಗಳ ಹಿಂದೆ ಅಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದನ್ನು ಆನಂದಿಸಿದ್ದ ಕುಮಾರಿ ನಾಗಶ್ರೀ ಮನಸಿನಲ್ಲಿ ಅನಿಸಿದ್ದು, ತನಗಾದ ಆ ಅನುಭವ ಬೇರೆ ಮಕ್ಕಳಿಗೂ ಆಗಬೇಕು ಎಂದು. ಇದನ್ನು ತಾಯಿ ಶ್ರೀಮತಿ ಜಯಶ್ರೀ ವಿದ್ಯಾಶಂಕರ್ ಹಾಗು ಆತ್ಮೀಯ ಮಿತ್ರರಲ್ಲಿ ಒಬ್ಬರಾದ ಹೆಗ್ಗಡೆ ದಂಪತಿಗಳ ಮುಂದಿಟ್ಟಳು.




ಶ್ರೀಮತಿ ಸುಮನ ಅವರಿಂದ ಮಕ್ಕಳ ಪೋಷಕರಿಗೆ ಒಂದು ಇಮೇಲ್ ಸಂದೇಶ ಬಂದಿತು. “ನಿಮ್ಮ ಮಕ್ಕಳು ತಮ್ಮನ್ನು ಯಾವುದಾದರು ಒಂದು ವಾದ್ಯ ನುಡಿಸುವುದರಲ್ಲಿ ತೊಡಗಿಸಿಕೊಂಡಿದ್ದರೆ, ಪಾಶ್ಚಾತ್ಯ ಸ್ವರ ಪ್ರಸ್ತಾರಗಳನ್ನು ಓದಲು ಬರುವುದಾದರೆ, ನಾವು ಅವರಿಗೆ ಒಂದು ವಾದ್ಯಗೋಷ್ಟಿಗೆ ಕುಮಾರಿ ನಾಗಶ್ರೀ ಹಾಗು ಶ್ರೀಮತಿ ಜಯಶ್ರೀ ಅವರ ಮಾರ್ಗದರ್ಶನದಲ್ಲಿ ತಯಾರಿ ಮಾಡುತ್ತೇವೆ. ಈ ವಿಷಯವನ್ನು ನಿಮ್ಮ ಸ್ನೇಹಿತರ ಗುಂಪಲ್ಲಿ ಇರುವ ಆಸಕ್ತ ಪೋಷಕರಿಗೆ ಹಾಗು ಮಕ್ಕಳಿಗೆ ತಿಳಿಸಿ” ಎಂದು ವಿನಂತಿಸಿದರು. ಆಸಕ್ತಿ ತೋರಿಸಿ ಬಂದ ಮಕ್ಕಳ ಸಂಖ್ಯೆ ೪೦. ನಾನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಕ್ಕಳಿಗೆ ತರಬೇತಿ ನೀಡಲು ಸರಿಯಾದ ಸಮಯ ಹುಡುಕುವ ದೊಡ್ಡ ಸವಾಲು ಎದುರಿಸ ಬೇಕಾಗಿ ಬಂದಿತು ಶ್ರೀಮತಿ ಜಯಶ್ರೀ ಅವರಿಗೆ. ಪ್ರತಿ ಭಾನುವಾರ ತಲಾ ಒಂದುವರೆ ಗಂಟೆ ಅವಧಿಯಲ್ಲಿ ಹಂತ ಹಂತವಾಗಿ ೬ ರಿಂದ ೭ ಕೃತಿಗಳನ್ನು ಕಲಿಸಲಾಯಿತು. ಕ್ಲಾರಿಯೋನೆಟ್ನಲ್ಲಿ ೫, ಕೊಳಲು ನುಡಿಸಲು 7, ಕೀ ಬೋರ್ಡ್ನಲ್ಲಿ 9 , ಟ್ರಂಪೆಟ್ನಲ್ಲಿ 2, ಗಿಟಾರ್ ನುಡಿಸಲು 2, ವಯೊಲಿನ್ ನುಡಿಸಲು 10, ಮೃದಂಗ ಹಾಗು ತಬಲ ಸೇರಿ ಸುಮಾರು ೫ ಮಕ್ಕಳು ಭಾಗವಹಿಸಿದ್ದರು. ಇದರಲ್ಲಿ ಭಾಗವಹಿಸಿದ್ದ ೯೦ ಪ್ರತಿ ಶತ ಮಕ್ಕಳಿಗೆ ಶಾಸ್ತ್ರೀಯ ಸಂಗೀತದ ತರಬೇತಿ ಇಲ್ಲದೆ ಇದ್ದರು, ಪಾಶ್ಚಾತ್ಯ ಸಂಗೀತದ ಅರಿವು ಇದ್ದಂತವರು. ಇದು ಮಕ್ಕಳಿಗೆ ವಿಶೇಷವಾಗಿ ಏರ್ಪಡಿಸಿದ್ದ ವಾದ್ಯ ಗೋಷ್ಠಿಗಳಲ್ಲಿ ಒಂದಾಗಿತ್ತು.

ಕಳೆದ ಸೆಪ್ಟೆಂಬರ್ನಲ್ಲಿ ಆಲೆನ್ ಗ್ರಂಥ ಭಂಡಾರದ (ಲೈಬ್ರರಿ)ಸಭಾಂಗಣದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಭಾಂಗಣದ ಆಸನಗಳಿಗೆ ೩೦೦ ಜನರ ಮಿತಿ ಇರುವುದರಿಂದ ಒಂದೇ ದಿನದಲ್ಲಿ ಎರಡು ಪ್ರದರ್ಶನವನ್ನು ಏರ್ಪಡಿಸಬೇಕಾಗಿ ಬಂದಿತು. ಎರಡು ಪ್ರದರ್ಶನಗಳು ತುಂಬು ಗೃಹ ಪ್ರದರ್ಶನವಾಗಿತ್ತು. ಶ್ರೀಮತಿ ಜಯಶ್ರೀಯವರು ಇದನ್ನು ಒಂದು ಉಚಿತ ಪ್ರದರ್ಶನವನ್ನಾಗಿ ನಡೆಸ ಬೇಕು. ಆಸಕ್ತಿ ಉಳ್ಳ ಜನರು ಏನಾದರು ದೇಣಿಗೆಯನ್ನು ನೀಡಲು ಬಯಸಿದ್ದಾದರೆ, ಅದನ್ನು Little Kids Rock or Ability Unlimitedಗೆ ನೀಡಲು ಕೋರಿದರು. ಸ್ಥಳದಲ್ಲೇ ಸುಮಾರು $೫೦೦೦ನ್ನು ಸಂಗ್ರಹಿಸಲಾಯಿತು. ಮಕ್ಕಳು ಅತಿ ಕ್ಲಿಷ್ಟಕರವಾದ ಕೃತಿಗಳನ್ನು ಶ್ರೀಮತಿ ಜಯಶ್ರೀ ಹಾಗು ಕುಮಾರಿ ನಾಗಶ್ರೀಯವರ ಮೇರು ಮಾರ್ಗದರ್ಶನದಲ್ಲಿ ಸುಲಲಿತವಾಗಿ ನುಡಿಸಿದರು. ನಾಟ ರಾಗದಲ್ಲಿ ಮುತ್ತುಸ್ವಾಮಿ ದೀಕ್ಷಿತರು ರಚಿಸಿರುವ “ಮಹಾಗಣಪತಿಂ”, ತ್ಯಾಗರಾಜರ ಮೇರು ಕೃತಿ “ಎಂದರೋ ಮಹಾನುಭಾವುಲು” ಹಾಗು ವಾದ್ಯ ಘೋಷ್ಠಿಗಳಿಗೆ ಹೇಳಿ ಮಾಡಿಸಿದಂತೆ ಇರುವ ಪಿ.ಸುಬ್ರಮಣ್ಯ ಅಯ್ಯರ್ ಅವರ ಜನಪ್ರಿಯ ರಚನೆ ಕದನ ಕುತೂಹಲ ರಾಗದ “ರಘು ವಂಶಸುಧಾಂಬುಧಿ” ಪ್ರೇಕ್ಷಕರನ್ನು ಕಾರ್ಯಕ್ರಮದ ಕೊನೆಯವರೆಗೂ ಅಯಸ್ಕಾಂತದಂತೆ ಸೆಳೆಯಿತು. ಕಾರ್ಯಕ್ರಮ ಮುಗಿದರು ಜನರ ಕರತಾಡನ ಕೊನೆಯವರೆಗೂ ಮುಂದುವರೆಯಿತು.

ಬಹುಜನರ ಅಪೇಕ್ಷೆಯ ಮೇರೆಗೆ ಈ ಕಾರ್ಯಕ್ರಮವನ್ನು ಎರಡನೆ ಬಾರಿಗೆ, ಇದೆ ತಿಂಗಳ ೨೧ರ ಸಾಯಂಕಾಲ ೫ರಿಂದ ೭ ಗಂಟೆಯವರೆಗೆ Granville Art Centerನಲ್ಲಿ ಏರ್ಪಡಿಸಲಾಗಿದೆ. ED Gurukul ಹಾಗು FunAsia Radio ಇದರ ಪ್ರಮುಖ ಪ್ರಾಯೋಜಕರಾಗಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಸಂಗ್ರಹವಾಗುವ ಹಣವನ್ನು Association for India Development Inc.,(AID) ಅವರ ಯೋಜನೆಗಳಲ್ಲಿ ಒಂದಾದ, ಗ್ರಾಮಾಂತರ ಪ್ರದೇಶದ ಮಕ್ಕಳ ಪ್ರಾಥಮಿಕ ಆರೋಗ್ಯ ಸುಧಾರಣೆಗೆ ಹಾಗು ಮಕ್ಕಳ ಪೌಷ್ಟಿಕ ಆಹಾರ ಯೋಜನೆಗೆ ಸದ್ವಿನಿಯೋಗ ಮಾಡಲಾಗುತ್ತದೆ. ಕನ್ನಡಿಗರಿಂದ ಯೋಜಿಸಲ್ಪಟ್ಟ, ಬಹುತೇಕ ಕನ್ನಡ ಮಕ್ಕಳು ಕೂಡಿರುವ ಈ ಕಾರ್ಯಕ್ರಮಕ್ಕೆ ಬನ್ನಿ, ಬಂದು ಪ್ರೋತ್ಸಾಹಿಸಿ.

# ಸುಳ್ಳುಗಾದೆ

- ಪೂರ್ಣಿಮ ಸುಬ್ರಹ್ಮಣ್ಯ



## *"ಶಿವಪೂಜೇಲಿ ಕರಡಿ ಬಿಟ್ಟ ಹಾಗೆ"*

"**ವೇ**ದ ಸುಳ್ಳಾದರೂ ಗಾದೆ ಸುಳ್ಳಾಗದು" ಅಂತಾನೇ ಒಂದು ಗಾದೆ ಇದೆ. ಅಂಥಾದ್ರಲ್ಲಿ 'ಏನಪ್ಪಾ ಇದು, ಸುಳ್ಳುಗಾದೇನಾ?' ಅಂತ ಆಶ್ಚರ್ಯ ಪಡ್ತಿದೀರಾ? ಹೌದು ನಿಜವಾಗ್ಲೂ "ಶಿವಪೂಜೇಲಿ ಕರಡಿ ಬಿಟ್ಟ ಹಾಗೆ?" ಅನ್ನೋದು ಸುಳ್ಳು ಗಾದೇನೇ. ಸುಳ್ಳುಗಾದೆ ಅನ್ನೋದಕ್ಕಿಂತ "ತಪ್ಪುಗಾದೆ" ಅಂದರೆ ಹೆಚ್ಚು ಸರಿ.

ನನಗೆ ಸ್ವಲ್ಪ ಆ ಹುಚ್ಚು, ಈ ಹುಚ್ಚು ಜೊತೆ ಗಾದೆಗಳ ಹುಚ್ಚು ಸ್ವಲ್ಪ ಜಾಸ್ತಿನೇ ಇದೆ. ಮಿಕ್ಕಿದ ಹುಚ್ಚುಗಳು ಯಾವುದು ಅಂತ ಹೆಚ್ಚು ತಲೆ ಕೆಡಿಸ್ಕೊಂಡು ಆಮೇಲೆ ನೀವು ಹುಚ್ಚಾಗ್ಬೇಡಿ. ಇಲ್ಲ, ಹೆಚ್ಚಿನ ವಿವರ ಬೇಕೇ ಬೇಕು ಅಂದ್ರೆ ದಯವಿಟ್ಟು ನನ್ನ ಗಂಡ, ಮಕ್ಕಳನ್ನು ಕೇಳಿ. ಏಕೆಂದರೆ ನನ್ನ ಹುಚ್ಚಿನ ಫಲಾನುಭವಿಗಳು ಅವರೇ ಅಲ್ವಾ? ಹೋಗ್ಲಿ ಬಿಡಿ, ಅದೆಲ್ಲಾ ಯಾಕೀಗ? ಸಧ್ಯಕ್ಕೆ ನನ್ನ ಗಾದೆ ಹುಚ್ಚಿನ ಬಗ್ಗೆ ಹೇಳ್ತೀನಿ.

ನಾನು ಯಾವ ಗಾದೆ ಕೇಳಿದ್ರೂ, ಅದು ಎಲ್ಲಿಂದ ಬಂತು, ಯಾವ ಕಾಲದಲ್ಲಿ ಬಂತು, ಯಾಕೆ ಬಂತು, ಅರ್ಥ ಏನು ಅಂತ ತಲೆ ಕೆಡಿಸ್ಕೊಳ್ಳೋದು ಜಾಸ್ತಿ. ಹೀಗೆ ಒಂದ್ಸಲ ಚಿಕ್ಕವಳಾಗಿದ್ದಾಗ(ಎಲ್ರೂ ಒಂದೇ ಸಲ ಚಿಕ್ಕವರಾಗಿರೋದು) ಯಾರ್ದೋ ಉಸಾಬರಿಗೆ ಹೋಗಿದ್ದಕ್ಕೆ "ಹೋಗೇ, ಬಂದ್ ಬಿಟ್ಳು ಮಧ್ಯ, ಒಳ್ಳೇ ಶಿವಪೂಜೇಲಿ ಕರಡಿ ಬಿಟ್ಟ ಹಾಗೆ" ಅಂತ ಉಗಿಸ್ಕೊಂಡೆ. ಅವ್ರು ಉಗೀತಿದಾರೆ ಅನ್ನೋ ಪರಿಜ್ಞಾನಾನೂ ಇಲ್ದೆ 'ಯುರೇಕಾ! ನನ್ನ ಸಂಶೋಧನೆಗೆ ಇನ್ನೊಂದು ವಿಷಯ ಸಿಕ್ತು'ಅಂತ ಸಿಕ್ಕಾಪಟ್ಟೆ ಖುಷಿಯಾಗಿ ಅವ್ರಿಗೆ ಥ್ಯಾಂಕ್ಸ್ ಹೇಳ್ದೆ. ಅವ್ರು 'ಇದ್ಯಾವ್ದೋ ಲೂಸು' ಅನ್ಕೊಂಡು ಸುಮ್ನಾದ್ರು.

ಸರಿ ವಿಷಯ ಸಿಕ್ತು, ಇನ್ನು ನಡೀಬೇಕಲ್ಲಾ ಸಂಶೋಧನೆ. ನನಗೆ ಗೊತ್ತಿದ್ದ ಶಿವನ ಕತೇನೆಲ್ಲಾ ಮೆಲುಕು ಹಾಕಿದೆ. ಯಾವ ಕತೇಲೂ ಕರಡಿ ಕಾಣ್ಲೇ ಇಲ್ಲ. ಸರಿ ನಾನೇ ಏನೇನೋ ಊಹೆ ಮಾಡ್ಕೊಂಡು ನನ್ನದೇ ಥಿಯರಿಗಳನ್ನು ಹೊಸೆದೆ. ಅದಕ್ಕೆ ಅಪ್ರೂವರ್ಸ್ ಬೇಕಲ್ಲಾ, ಬಡಪಾಯಿ ನನ್ನಣ್ಣ ಸಿಕ್ದ, ಸರಿ ಅವನ ತಲೆ ಕೊರೆದೆ. ಅವನೂ ಕೇಳಿ ಕೇಳಿ ಸಾಕಾಗಿ "ನೋಡೇ, ಕರಡಿಗಳಿಗೆ ಹಿಡಿತ ಜಾಸ್ತಿ. ಏನು ಮಾಡಿದ್ರೂ ಪಟ್ಟು ಬಿಡಲ್ಲ. ಶಿವಪೂಜೆ ಮಾಡೋರು ಭಯ ಭಕ್ತಿ ಇಂದ ಮಾಡ್ತಿರ್ತಾರೆ. ಹಿಂದಿನ ಕಾಲದಲ್ಲಿ ಯಾರೋ ರಾಕ್ಷಸ, ಒಳ್ಳೆ ವರ ಪಡೆಯಕ್ಕೆ ಶಿವಧ್ಯಾನ ಮಾಡ್ಕೊಂಡು ತಪಸ್ಸು ಮಾಡ್ತಾ ಇದ್ದ ಅಂತ ಕಾಣುತ್ತೆ. ಆಗ ಹೆದರ್ ಪುಕ್ಲ ಇಂದ್ರ ಅವನ ತಪಸ್ಸು ಹಾಳು ಮಾಡಕ್ಕೆ ಯಾರ್ಯಾರೋ ಅಪ್ಸರೇರ್ನ ಡ್ಯಾನ್ಸ್ ಮಾಡಕ್ಕೆ ಕಳ್ಸಿರ್ತಾನೆ. ಇವ್ನು ಕ್ಯಾರೇ ಅನ್ನಲ್ಲ. ಅದಕ್ಕೆ ಪ್ಲಾನ್ ಮಾಡಿ ಅಗ್ನೀನೋ, ವರುಣನ್ನೋ , ಯಾರೋ ಗಂಧರ್ವನ್ನೋ ದೊಡ್ಡ ಕರಡಿ ಮಾಡಿ ಛೂ ಬಿಟ್ಟಿರ್ತಾನೆ. ಅದಕ್ಕೆ ಈ ಗಾದೆ ಹುಟ್ಟಿಬರ್ಬೋದು" ಅಂತ ಅವ್ನ ಥಿಯರಿ ಹೇಳಿದ. ನಾನು ಸುಮ್ನೆ ಒಪ್ಕೊಂಡ್ರೆ ಸಂಶೋಧನೆ ಹೆಸ್ರಿಗೇ ಅವ್ಮಾನ ಅಲ್ವಾ. ಅದಕ್ಕೆ 'ಆ ರಾಕ್ಷಸನ ಹೆಸರೇನು?, ಅವನು ಏನು ವರ ಪಡೆದ?' ಅಂತೆಲ್ಲಾ ಪ್ರಶ್ನೆ ಕೇಳ್ದೆ. 'ಅಷ್ಟಕ್ಕೂ ನಾನು ಓದಿರೋ ಕತೇಲಿ, ನೋಡಿರೊ ಸಿನಿಮಾ ಎಲ್ಲಾವ್ದ್ರಲ್ಲೂ ರಾಕ್ಷಸರು ತಪಸ್ಸು ಮಾಡೋವಾಗ "ಓಂ ನಮೋ ಬ್ರಹ್ಮ ದೇವಾಯ ನಮಃ" ಅಂತ ಬ್ರಹ್ಮನ್ನಲ್ವಾ ಧ್ಯಾನ ಮಾಡೋದು. ರಾವಣ ಏನೋ ಆತ್ಮಲಿಂಗ ತಗೊಳ್ಳಕ್ಕೆ ಶಿವನ್ನ ತಪಸ್ಸು ಮಾಡ್ದ, ಇಸ್ಕೊಂಡ. ಅದನ್ನ ವಾಪಸ್ ತರಕ್ಕೆ ನಾರದ ಗಣೇಶನ ಜೊತೆ ಫ಼ಿಟ್ಟಿಂಗ್ ಇಟ್ಟ. ಹಾಗಾದ್ರೆ ಗಾದೆ "ಶಿವಪೂಜೇಲಿ ಆನೆ ಬಿಟ್ಟ ಹಾಗೆ" ಅಂತ ಇರ್ಬೇಕಾಗಿತ್ತು ಅಲ್ವಾ, ಕರಡಿ ಯಾಕೆ' ಅಂತ ಪಾಟಿಸವಾಲು ಹಾಕ್ದೆ. ಅವ್ನಿಗೆ ರೇಗಿ, "ಹೋಗೇಲೇ, ಆ ಗಾದೆ ಬರ್ದೋನ್ಗೆ ನಿನ್ನಂತ ಕರಡಿಗ್ಳು ಇರುತ್ವೆ ಅಂತ ಗೊತ್ತಿರ್ಲಿಲ್ಲ. ಗೊತ್ತಿದ್ರೆ "ಶಿವಪೂಜೇಲಿ ಪೂರ್ಣಿಮನ್ನ ಬಿಟ್ ಹಾಗೆ" ಅಂತಾನೆ ಬರ್ದಿರೋನು. ನಾನೇನೋ ಒಳ್ಳೆ ಕ್ರಿಕೆಟ್ ಮ್ಯಾಚ್ ನೋಡ್ತಿದ್ದೆ. ಬಂದ್ ಬಿಟ್ಳು ಶಿವಪೂಜೇಲಿ ಕರಡಿ" ಅಂತ ಬಯ್ದ .

ಅವ್ನು ಬಯ್ದ ಅನ್ನೋ ಅವ್ಮಾನಕ್ಕಿಂತ, ನನ್ ಕುತೂಹಲ ಇನ್ನೂ ಜಾಸ್ತಿ ಆಯ್ತು. ಗಾದೆಗೆ ಇನ್ನೊಂದು ತಿರುವು ಸಿಕ್ತಲ್ಲಾ ಅನ್ತ. ಸರಿ ಹೇಗಿದ್ರೂ ತಾತಂಗೆ ಪುರಾಣ ಎಲ್ಲಾ ಚೆನ್ನಾಗಿ ಗೊತ್ತಲ್ಲಾ, ಅವ್ರನ್ನೆ ಕೇಳೋಣ ಅಂತ ರಜಾ ಬರೋವರ್ಗೂ ಕಾದೆ. ಅದನ್ನ ಕೇಳಕ್ಕೆ ರಜಾ ಯಾಕೆ ಅಂದ್ರಾ? ನಮ್ ತಾತನ ಊರಿಗೆ ಹೋಗ್ಬೇಕಲ್ಲಾ? ಆಗ ಫೋನೆಲ್ಲಾ ಇಷ್ಟೊಂದು ಇರ್ಲಿಲ್ಲ. ಇದ್ದಿದ್ರೂ ಬಿಲ್ ಬಂದ್ಮೇಲೆ ನಂಗೆ ಮಂಗ್ಳಾರ್ತಿ ಆಗಿರೋದು. ಕಾಗದ ಬರೀಬಹುದು. ಆದರೆ ಅವ್ರು ಉತ್ತರ ಬರೆದು, ನನ್ಗೆ ಅದರಲ್ಲಿ ಅನುಮಾನ ಬಂದು, ಪ್ರಶ್ನೆಗೊಂದು ಕಾಗ್ದ ಕಳ್ಸಿ, ಅವ್ರು ಅದಕ್ಕೆ ಉತ್ತರ ಬರೆದು, ಮತ್ತೆ ಪ್ರಶ್ನೆ– ಉತ್ತರ ಈ ಗೋಳು, ಪೋಸ್ಟ್‌ಮ್ಯಾನ್ ಶಾಪ ಎರ್ಡೂ ಬೇಡ ಅಂತ ರಜಾ ಬರೋವರ್ಗೂ ಕಾದೆ.

ರಜದಲ್ಲಿ ತಾತನ ಮನೆಗೆ ಹೊದಾಗ ಅವ್ರನ್ನ ಕೇಳಿದೆ. ಆಗ ಅವ್ರು ಹೇಳಿದ್ರು "ಅಯ್ಯೋ ಆ ಗಾದೇನೇ ತಪ್ಪು. ಅದು ನಿಜವಾಗ್ಲೂ 'ಶಿವಪೂಜೇಲಿ ಕರಡಿಗೆ ಬಿಟ್ಟ ಹಾಗೆ' ಅಂತ. ಈ ವೀರಶೈವರು ಇರ್ತಾರಲ್ಲಾ, ಅವ್ರು ಪೂಜೆ ಮಾಡೋ ಇಷ್ಟಲಿಂಗಾನ ಒಂದು ಪುಟ್ಟ ಡಬ್ಬೀಲಿ ಇಟ್ಕೊಂಡಿರ್ತಾರೆ. ಆ ಡಬ್ಬೀಗೆ "ಕರಡಿಗೆ" ಅಂತ ಹೆಸರು. ಅವ್ರು ಶಿವನ್ನ ಪೂಜೆ ಮಾಡೋವಾಗ ಈ ಲಿಂಗ ಇರೋ ಕರಡಿಗೆ ತುಂಬಾ ಮುಖ್ಯ. ಅದೆ ಇಲ್ಲ ಅಂದ್ರೆ ಏನು ಪೂಜೆನೂ ನಡೆಯಲ್ಲ. ಇದು ಆ ಗಾದೆ ಅರ್ಥ" ಅಂತ ವಿವರಿಸಿದ್ರು.

ಆಗ್ಲಿಂದ ನಾನು ಸಿಕ್‌ಸಿಕ್ಕೋರಿಗೆ ಇದ್ರ ಬಗ್ಗೆ ಲೆಕ್ಚರ್ ಕೊಡ್ತಿದೀನಿ. ಈಗ ನಿಮ್ ಸರ್ದಿ. ಗೊತ್ತಾಯ್ತಲ್ಲ, ಇನ್ಮೇಲೆ ಯಾರಾದ್ರೂ ಕೆಲ್ಸದ ಮಧ್ಯೆ ಬಂದ್ರೆ "ಶಿವಪೂಜೇಲಿ ಕರಡಿ" ಅಂತ ಬಯ್ಬೇಡಿ. ಬದಲಿಗೆ ಶಾಪಿಂಗ್ ಹೋದಾಗ ದುಡ್ಡೋ, ಕಾರ್ಡೋ ಮರೆತಿದ್ರೆ ಆಗ "ಶಿವಪೂಜೇಲಿ ಕರಡಿಗೆ ಬಿಟ್ಟ ಹಾಗೆ" ಅಂತ ಅಂದ್ಕೊಳಿ. ಭಾರತಕ್ಕೆ ಹೋಗೋವಾಗ ಟಿಕೆಟ್, ಪಾಸ್‌ಪೋರ್ಟ್ ಮನೇಲಿ ಮರೆತು ಏರ್ಪೋರ್ಟ್‌ಗೆ ಬಂದು ಆಗ ಈ ಗಾದೆ ನೆನಪಿಸ್ಕೊಳ್ಳೋ ಹಾಗೆ ಮಾಡ್ಕೋಬೇಡಿ. ನೋಡಿ, ಈ ಗಾದೇಲಿ ಕರಡಿಗೆ ಪದದಲ್ಲಿ 'ಗೆ' ಅಕ್ಷರ ಬಿಟ್ಟಿದ್ದು ಒಳ್ಳೇ "ಶಿವಪೂಜೇಲಿ ಕರಡಿಗೆ ಬಿಟ್ಟ ಹಾಗೆ" ಆಯ್ತಲ್ವಾ?

*"ಶಿವಪೂಜೇಲಿ ಕರಡಿಗೆ ಬಿಟ್ಟ ಹಾಗೆ"*

**user ಒಪ್ಪಿದ್ರೂ tester ಬಿಡ**

## ಮ್ಯಾರಥಾನ್ ಯಶೋಗಾಥೆ

- ಮೀನಾ ಭಾರದ್ವಾಜ್

**ಮ**ಲ್ಲಿಗೆ ಕನ್ನಡ ಸಂಘದ ನಿಮ್ಮ ಪುಟ ವಿಭಾಗದಲ್ಲಿ ಉಲ್ಲೇಖಿಸಿದಂತೆ ಮ್ಯಾರಥಾನ್ ಯಶೋಗಾಥೆ ಮುಂದುವರೆದಿದೆ. ಸತತವಾಗಿ ಕಳೆದ ಮೂರು ವರ್ಷಗಳಿಂದ ಈ ಮ್ಯಾರಥಾನ್ನಲ್ಲಿ ಮಲ್ಲಿಗೆ ಕನ್ನಡ ಸಂಘದ ಸದಸ್ಯರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆಗಾಗ್ಗೆ ಒಂದು ೫ ಕೆ ಓಡಿದ ಬಗ್ಗೆಯೋ , ರಿಲೇ ಓಡಿದ ಬಗ್ಗೆಯೋ ಅಬ್ಬಬ್ಬಾ ಎಂದರೆ ಒಂದು ಹಾಫ್ ಮ್ಯಾರಥಾನ್ ಬಗ್ಗೆಯೋ ಕೇಳುತ್ತಿದ್ದ ನಾವು ಈಗ ೨೬.೨ ಮೈಲಿಗಳನ್ನು ಯಶಸ್ವಿಯಾಗಿ ಮುಗಿಸಿದ ವಿಷಯವನ್ನು ಕೇಳುತ್ತಿದ್ದೇವೆ.



ಜೀವನದಲ್ಲಿ ಸವಾಲುಗಳನ್ನು ಸ್ವೀಕರಿಸಿ ಅದನ್ನು ಎದುರಿಸದಿದ್ದರೆ ಜೀವನ ನೀರಸ ಎನಿಸಬಹುದು. ಸವಾಲುಗಳು ಆತ್ಮ ಸ್ಥೈರ್ಯ ಹೆಚ್ಚಿಸುವ ಸಾಧನವೂ ಹೌದು. ಮೂರು ವರುಷಗಳ ಹಿಂದೆ ಮೂರು ಮೈಲು ಓಡುವುದು ನಮ್ಮಿಂದಾಗದ ಕೆಲಸವೆಂದು ಭಾವಿಸಿದ್ದ ನಮ್ಮ ಗುಂಪಿನ ಸದಸ್ಯರು, ಈ ವರ್ಷ "ನಾವು ರಿಲೇ ಓಡಿದ್ದೇವೆ, ಹಾಫ್ ಮ್ಯಾರಥಾನ್ ಕೂಡ ಮಾಡಿದ್ದು ಆಯಿತು. ಮುಂದೇನು? ಫುಲ್ ಮ್ಯಾರಥಾನ್(೨೬.೨ ಮೈಲು) ಮಾಡಿಯೇ ಬಿಡೋಣ" ಎಂದಾಗ ಎದುರಾದ ಪ್ರಶ್ನೆ, ನಮಗೆ ಅಷ್ಟು ದೂರ ಕ್ರಮಿಸುವಷ್ಟು ದೈಹಿಕ ಶಕ್ತಿ , ಅದಕ್ಕೆ ತಯಾರಿ ನಡೆಸುವಷ್ಟು ಸಮಯ ಇದೆಯೇ ಎಂದು. ತರಬೇತಿ ಸಮಯದಲ್ಲಿ ಬೇಕಾಗುವ ಮಾರ್ಗ ನಕ್ಷೆ, ನೀರಿನ ವ್ಯವಸ್ಥೆ ಇದನ್ನೆಲ್ಲಾ ನಮಗೆ ನಾವೇ ಮಾಡಿಕೊಳ್ಳುವುದು ಕಷ್ಟವಾಗ ಬಹುದು. ಇದರಲ್ಲೇ ಅನುಭವವಿರುವ ಯಾವುದಾದರು ಗುಂಪಿಗೆ ನಮ್ಮನ್ನು ನಾವು ನೋಂದಾಯಿಸಿಕೊಳ್ಳುವುದು ಒಳ್ಳೆಯದು ಎಂದು ನಿರ್ಧರಿಸಿದೆವು. ಎಲ್ಲರಿಗೂ ಹತ್ತಿರವಿರುವ    ಸ್ಟೋರ್ ನಡೆಸುವ ಮ್ಯಾರಥಾನ್ ತರಬೇತಿಗೆ ಶ್ರೀ ಶ್ರೀಧರ್ ಚಿಕ್ಕೋಡಿ, ನೀಲಿಮ ಚಿಕ್ಕೋಡಿ, ವಿನಯ ರಾವ್, ಶ್ರೀಧರ್ ಮಧುಗಿರಿ, ಪ್ರಿಯ ರಾವ್, ವೀಣಾ ವಡವಡಗಿ,ಮೀನಾ ಭಾರದ್ವಾಜ್,ಸತ್ಯ ಶಾಸ್ತ್ರಿ,ಲತಾ ಶಾಸ್ತ್ರೀ,ಶುಭ ಶ್ರೀವತ್ಸ ನೋಂದಾಯಿಸಿದೆವು. ಹಿಂದೆ ಪೂರ್ಣ ಮ್ಯಾರಥಾನ್ ಓಡಿ ಅನುಭವವಿದ್ದ ಶ್ರೀ ರಘುರಾಮ್, ಮಧು ಶಾಸ್ತ್ರಿ ಹಾಗು ಗೋವಿಂದ್ ವಡವಡಗಿಯವರು ತಮ್ಮದೇ ಗುಂಪನ್ನು ರಚಿಸಿ ಸ್ವಯಂ ತರಬೇತಿಯನ್ನು ನಡೆಸಿದರು. ಶ್ರೀ ಶ್ರೀವತ್ಸ ರಾಮನಾಥನ್ ಹಾಗು ಶ್ರೀಷ ರಾವ್ ಅವರು ಹಾಫ್ ಮ್ಯಾರಥಾನ್ ಮಾಡುವುದೆಂದು ನಿರ್ಧರಿಸಿದರು.




ಕಳೆದ ಡಿಸೆಂಬರ್ ೪ ರಂದು ಡಲ್ಲಾಸ್ ಡೌನ್ ಟೌನ್ನಲ್ಲಿ ನಡೆದ ವೈಟ್ ರಾಕ್ ಮ್ಯಾರಥಾನ್ನಲ್ಲಿ ಮಲ್ಲಿಗೆ ಕನ್ನಡ ಸಂಘದ ೧೬ ಸದಸ್ಯರು, ಹವಾಮಾನ ವೈಪರೀತ್ಯದ ನಡುವೆ ೨೬.೨ ಮೈಲನ್ನು ಯಶಸ್ವಿಯಾಗಿ ಮುಗಿಸಿರುತ್ತಾರೆ. . ಇದಲ್ಲದೆ ಶ್ರೀ ರಾಜೇಶ್ ರಾವ್( ರಿಚರ್ಡ್ಸನ್ ), ಶ್ರೀ ದತ್ತಪ್ರಸಾದ್(ಪ್ಲೇನೋ), ಶ್ರೀಮತಿ ವಿದ್ಯಾ ದತ್ತ(ಪ್ಲೇನೋ), ಶ್ರೀಮತಿ ಗೀತಾ ಶಿವಕುಮಾರ್(ಅರ್ವಿಂಗ್) ಹಾಗೂ ಶ್ರೀಮತಿ ಸುಮಾ ಶ್ರೀಹರಿಯವರು(ಫ್ಲವರ್ ಮೌಂಡ್) ಸಹ ಹಾಫ್ ಮ್ಯಾರಥಾನ್ನು ಯಶಸ್ವಿಯಾಗಿ ಮುಗಿಸಿರುತ್ತಾರೆ. ಇವರೆಲ್ಲರಿಗೂ ಮಲ್ಲಿಗೆ ಕನ್ನಡ ಸಂಘದ ಪರವಾಗಿ ಅಭಿನಂದನೆಗಳು.

## ಚಿತ್ರಾವಳಿ

### ಮಲ್ಲಿಗೆ ದೀಪಾವಳಿ ಸಮಾರಂಭದ ಚಿತ್ರಗಳು



ಮುಂದಿನ ಸಂಚಿಕೆಯನ್ನು ಯುಗಾದಿ 2012ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

**deadline ಕಾಲದಲ್ಲಿ overtime**